# ಭಗವಾನ್ ಶ್ರೀ ಬಾಹುಬಲಿ ಗೋಮಟೇಶ್ವರ

## ಮಹಾಮಸ್ತಕಾಭಿಷೇಕ ಮಹೋತ್ಸವ-೧೯೯೩

ಕವಿಸಮ್ಮೇಳನ

9-12-1993

ಡಾ|| ಸಿದ್ಧಯ್ಯ ಪುರಾಣಿಕರ

ಅಧ್ಯಕ್ಷ ಭಾಷಣ

ಜಯಂತಿ ಶ್ರೀ ಬೆಳುಗುಳ ಗೋಮಟೇಶ ಮೂರ್ತಿ

—ಶಾಂತರಾಜ ಪಂಡಿತ

ನಮಿಸುವೆನು ಮೂಲೋಕವನು ನಿ ।
ರ್ಮಿಸಿದ ಕವಿ ಶಂಕರನಿಗೆ ।
ನಿಮಿಷ ನಿಮಿಷಕು ವಿಶ್ವರಂಗದಿ
ನಾಟಕದ ನೋಟದಲಿ ಜನರಿಗೆ
ರಸವನುಕ್ಕಿಸುತಿಹನಿಗೆ ॥

—ಭಟ್ಟನಾಯಕ (ಕನ್ನಡಕ್ಕೆ ದಿ. ಆಚಾರ್ಯ ತೀ. ನಂ. ಶ್ರೀ ಅವರಿಂದ)

ಪರಮ ಜಿನೇಂದ್ರವಾಣಿಯೆ ಸರಸ್ವತಿ, ಬೇಱದು ಪೆಣ್ಣರೂಪಮಂ ।
ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ– ॥
ದರಿಸುವ ಭವ್ಯಕೋಟಿಗೆ ನಿರಂತರ ಸೌಖ್ಯಮನೀವುದಾನದ–।
ಕೆಱೆದಪೆನಾ ಸರಸ್ವತಿಯೆ ಮತ್ಕೃತಿಗಿಲ್ಲಿಯೆ ವಾಗ್ವಿಳಾಸಮಂ ॥

— ಆದಿಕವಿ ಪಂಪ

ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳೆ, ಪರಮಪೂಜ್ಯ ಆಚಾರ್ಯ ವರ್ಧಮಾನ ಸಾಗರಜಿ ಅವರೆ, ಪೂಜ್ಯ ಮುನಿಗಳೆ, ಶ್ರಮಣರೆ, ಶ್ರಾವಕರೆ, ಭಗವಾನ್ ಬಾಹುಬಲಿ ಗೋಮಟೇಶ್ವರ ಮಹಾಮಸ್ತಕಾಭಿಷೇಕದಲ್ಲಿ ಪಾಲುಗೊಳ್ಳಲು ಬಂದಿರುವ ಭವ್ಯಾತ್ಮರೆ,ಕವಿ ಸಮ್ಮೇಳನದಲ್ಲಿ ಭಾಗವಹಿಸಲು ಬಂದಿರುವ ಹಿರಿಯ ಕವಿ–ಕವಯಿತ್ರಿಯರೆ, ಸಹೃದಯರೆ, ಕನ್ನಡ ಕುಲ ಬಾಂಧವರೆ.

ಸುಮಾರು ಮುವ್ವತ್ತು ಶತಮಾನಗಳ ಹಿಂದೆಯೇ ಜಗತ್ತಿಗೆ ಜಗತ್ತಾರಕ ತತ್ತ್ವವಾದ ಅಹಿಂಸೆಯನ್ನೂ, ವೈಜ್ಞಾನಿಕವಾದ ಅನೇಕಾಂತವಾದವನ್ನೂ, ಚಲನೆಯ ನಿಯಮಗಳನ್ನೂ, ರತ್ನತ್ರಯಗಳನ್ನೂ, ಪಂಚಾಣು ವ್ರತಗಳನ್ನೂ ನೀಡಿ, 'ದೇವತೆಗಳು ನೇರವಾಗಿ ಮುಕ್ತಿಯನ್ನು ಪಡೆಯಲಾರರು. ಅವರು ಮನುಷ್ಯರಾಗಿ ಇಲ್ಲಿ ಹುಟ್ಟಬೇಕು. ಅನಂತರ ಅವರಿಗೆ ಮೋಕ್ಷವನ್ನು ಹೊಂದುವ ನಿರೀಕ್ಷೆ ಮೂಡುತ್ತದೆ. ಮನುಷ್ಯ ಜನ್ಮವೇ ಮೋಕ್ಷಕ್ಕೆ ಪ್ರವೇಶ ಮಾಡುವ ಮಾರ್ಗ' ಎಂದು ಸಾರಿ ಮಾನವ ಜನ್ಮ ಪಾರಮ್ಯವನ್ನು ಪ್ರಸ್ಥಾಪಿಸಿದ ಜೈನಧರ್ಮದ ಪರಮ ಪವಿತ್ರ ಕ್ಷೇತ್ರಗಳಲ್ಲಿ ಒಂದಾದ ಈ ಶ್ರವಣಬೆಳ್ಗೊಳದ ಮಹತಿ ಅವರ್ಣನೀಯವಾದುದು.

ಈ ಪರಿಯ ಸೊಬಗನಿನ್ನಾವ ಕ್ಷೇತ್ರದಲಿ ಕಾಣಬಹುದು? ಪ್ರಾಚೀನತೆಯಲಿ ನೋಡೆ ಕ್ರಿ. ಶ. ಪೂರ್ವ 300ರಲ್ಲಿಯೇ ಭಗವಾನ್ ಮಹಾವೀರರ ಎಂಟನೆಯ

ಉತ್ತರಾಧಿಕಾರಿಗಳಾದ ಶ್ರುತಕೇವಲಿ ಭದ್ರಬಾಹುಮುನಿಗಳು ಸಲ್ಲೇಖನ ಸಮಾಧಿ ಹೊಂದಿದ ಸ್ಥಳವಿದು; ಪಾವನತ್ವದಿ ನೋಡೆ ಭದ್ರಬಾಹು, ಕುಂದಕುಂದ, ಸಮಂತಭದ್ರ, ಪೂಜ್ಯಪಾದ, ವೀರಸೇನ, ಗುಣಭದ್ರ, ಅಕಲಂಕ, ಅಜಿತಸೇನ, ನೇಮಿಚಂದ್ರ, ವಾದಿರಾಜ, ಬಾಲಚಂದ್ರ ಮೊದಲಾದ ಮುನಿವರ್ಯರ ಪಾದರೇಣುವಿನಿಂದ ಪವಿತ್ರವಾದ ಸ್ಥಳವಿದು; ಪ್ರಭಾವ ವೈಭವಗಳನ್ನು ನೋಡೆ ಮೌರ್ಯ, ಗಂಗ, ಚಾಲುಕ್ಯ ಹೊಯ್ಸಳ, ವಿಜಯನಗರಗಳ ಸಾಮ್ರಾಟರನ್ನು ಆಕರ್ಷಿಸಿದ ಸ್ಥಳವಿದು; ಕಲಾ ಪ್ರೌಢಿಮೆಯನ್ನು ನೋಡೆ ವಿಶ್ವದಲ್ಲಿಯೇ ಅದ್ವಿತೀಯವಾದ ಶ್ರೀ ಗೋಮಟೇಶ್ವರ ಮೂರ್ತಿಯನ್ನೂ, ಚಂದ್ರಗಿರಿಯಲ್ಲಿ ಹಲವು ಹನ್ನೆರಡು ಸುಂದರ ಬಸದಿಗಳನ್ನೂ ಹೊಂದಿರುವ ಸ್ಥಳವಿದು. ಸಾಹಿತ್ಯ ಸಂಪತ್ತಿನಿಂದ ನೋಡಿದರೆ ಬೊಪ್ಪಣ,ಪಂಚಬಾಣ, ಪಾಯಣವರ್ಣಿ, ಚಿದಾನಂದ, ಅನಂತಕೀರ್ತಿ, ಪಂಡಿತಾಚಾರ್ಯರಾದಿಗಳಿಗೆ ಜನ್ಮವಿತ್ತು ಚಾಮುಂಡರಾಯ, ರನ್ನ, ಒಂದನೆಯ ನಾಗವರ್ಮ, ಅಗ್ಗಳ, ಸಾಳ್ವ, ಭಟ್ಟಾಕಳಂಕ ಮೊದಲಾದ ಮಹತ್ವದ ಕವಿಗಳಿಗೆ ಸ್ಫೂರ್ತಿ ಪ್ರೇರಣೆಯನ್ನಿತ್ತು ಕನ್ನಡ ಸಾಹಿತ್ಯವನ್ನು ಬಹುವಾಗಿ ಶ್ರೀಮಂತಗೊಳಿಸಿದ ಸ್ಥಳವಿದು; ಸಾಂಸ್ಕೃತಿಕವಾಗಿ ನೋಡಿದರೆ ಇಲ್ಲಿಯ ೫೭೩ ಶಾಸನಗಳಲ್ಲಿ ಸೂರೆಗೊಂಡಿರುವ ಜೀವನ ಮೌಲ್ಯಗಳು–ಶೌರ್ಯ, ಸಾಹಸ, ದಾನ ಶಮೆ, ದಮೆ, ಕ್ಷಮೆ, ಕಲಾಭಿರುಚಿ, ಪರಮತ ಸಹಿಷ್ಣುತೆ, ಪಾಪಭೀರುತ್ವ, ಭಗವದ್ಭಕ್ತಿ–ಇತ್ಯಾದಿಗಳು ರೂಪಿಸಿದ ಉದಾತ್ತ ಸಂಸ್ಕೃತಿಯ ಸ್ಥಳವಿದು; ನಿಸರ್ಗ ರಮ್ಯತೆಯ ದೃಷ್ಟಿಯಿಂದ ನೋಡಿದರೆ ಪ್ರಕೃತಿ ಮತ್ತು ಮಾನವ ಮತಿಗಳು ಸುಮಧುರ ಸಹಕಾರದಿಂದ ನಿತಾಂತ ಸುಂದರವನ್ನಾಗಿಸಿದ ಸ್ಥಳವಿದು; ಯಾವ ದೃಷ್ಟಿಯಿಂದ ನೋಡಿದರೂ ಶ್ರೀ ಗೊಮ್ಮಟನಂತೆ ಆತ್ಮೋಪಮವಾದ ಸ್ಥಳವಿದು; ಅವಿಮುಕ್ತ ಕ್ಷೇತ್ರವಿದು.

ಇಂಥ ಗರಿಮಾಮಯ, ಮಹಿಮಾನ್ವಿತ ಕ್ಷೇತ್ರದಲ್ಲಿ ಮಹಾಮಸ್ತಕಾಭಿಷೇಕದೊಡನೆ ಕನ್ನಡ ಕವಿ ಸಮ್ಮೇಳನವೂ ನಡೆಯುತ್ತಲಿರುವುದು ಪ್ರಶಂಸನೀಯವಾದುದು. ಹಿಂದಿನ, ಇಂದಿನ ಅಸಂಖ್ಯ ಕನ್ನಡ ಕವಿಗಳಿಗೆ ಸ್ಫೂರ್ತಿದಾಯಕನಲ್ಲವೆ ಶ್ರೀ ಗೋಮಟೇಶ. ಇದಕ್ಕಾಗಿ ಮಹಾಮಸ್ತಕಾಭಿಷೇಕ ಮಹೋತ್ಸವ ಸಮಿತಿಗೆ ಅಭಿನಂದನೆಗಳು, ಅಭಿವಂದನೆಗಳು.

ಈ ಕವಿ ಸಮ್ಮೇಳನಕ್ಕೆ ನಾನೇ ಅಧ್ಯಕ್ಷನಾಗಬೇಕೆಂಬುದು ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರ ಅಪೇಕ್ಷೆಯಾಗಿದೆಯೆಂದು ನನ್ನ ಮಾನ್ಯ ಕವಿಮಿತ್ರರಾದ ಶ್ರೀ ಜಿನದತ್ತದೇಸಾಯಿ ಅವರು ಬಂದು ಹೇಳಿದಾಗ ನನ್ನ ಕಿವಿಗಳನ್ನು ನಾನೇ ನಂಬದಾದೆ. ನನ್ನ ಪೂಜ್ಯ ತಂದೆ ತಾಯಿಗಳು ಎಷ್ಟು ಪುಣ್ಯ ಮಾಡಿರಬೇಕು ನನಗೀ ಅಪೂರ್ವ ಅವಕಾಶ ದೊರೆಯಲು! ಅವರನ್ನು ನೆನೆದು,



ಪ್ರಗಲ್ಭ ಪಾಂಡಿತ್ಯ, ಅಮೋಘ ವಾಗ್ಮಿತ್ವ, ನೂರಾರು ಜನಕಲ್ಯಾಣ ಕಾರ್ಯಗಳನ್ನು ನಡೆಸುತ್ತಲೂ, ಹಮ್ಮಿಕೊಳ್ಳುತ್ತಲೂ ಇರುವ ಅಸಾಧಾರಣ ಕರ್ತೃತ್ವ, ಸರ್ವಜೀವ ದಯಾಪಾರಿತ್ವ ಇತ್ಯಾದಿಗಳಿಂದ ಅತ್ಯುಜ್ವಲ ವ್ಯಕ್ತಿತ್ವವನ್ನು ಪಡೆದಿರುವ ಈ ಪೂಜ್ಯರಿಗೆ ನನ್ನ ಶತಶತ ಪ್ರಣಾಮಗಳು. ಈ ಪಾವನ ಪರಿಸರದಲ್ಲಿ ಅಗೋಚರವಾಗಿದ್ದುಕೊಂಡು ಈ ಸದಾಸ್ಮರಣೀಯ ಸಮಾರಂಭಗಳನ್ನು ವೀಕ್ಷಿಸುತ್ತಿರಬಹುದಾದ ವೀರಮಾರ್ತಾಂಡ, ಸಮ್ಯಕ್ತ್ವರತ್ನಾಕರ ಚಾಮುಂಡರಾಯನ, ಅವನ ಮಹಾಮಾತೆ ಕಾಳಲದೇವಿಯ, ಸಿದ್ಧಾಂತ ಚಕ್ರವರ್ತಿ ನೇಮಿಚಂದ್ರರ, ಕವಿಚಕ್ರವರ್ತಿ ರನ್ನನ, ಶಿಲ್ಪಿ ಚಕ್ರವರ್ತಿ ಅರಿಷ್ಟನೇಮಿಯ, ಅವನ ಪುಣ್ಯ ಜನನಿಯ, ಶುದ್ಧ ಭಕ್ತಿಯ ಸಾಮ್ರಾಜ್ಞಿ ಗುಳ್ಳಿಕಾಯಜ್ಜಿಯ, ನಾಟ್ಯ ಸಾಮ್ರಾಜ್ಞಿ ಶಾಂತಲೆಯ, ದಾನಚಿಂತಾಮಣಿ ಅತ್ತಿಮಬ್ಬೆಯ ಇನ್ನೂ ಅನೇಕ ಮಹಾಮಾನವ ಮಹಾ ಮಹಿಳೆಯರ ಅಮಲ ತನು ಆತ್ಮಗಳಿಗೆ ವಂದನೆಗಳನ್ನರ್ಪಿಸಿಯೇ ಮುಂದುವರಿಯುತ್ತೇನೆ.

ಬದುಕು ನೀಡುವ ಅನುಭವಗಳಿಂದ ಬದುಕನ್ನು ಅರ್ಥವಿಸಿಕೊಳ್ಳುವ ಹಂಬಲವೇ ಹಾಡಾಗಿ ಹೊರಹೊಮ್ಮುತ್ತದೆ. ಬದುಕನ್ನು ರೂಪಿಸುವ, ಪ್ರಭಾವಿಸುವ, ನಿಯಂತ್ರಿಸುವ ಶಕ್ತಿಗಳಾವುವು ? ಪರಂಪರೆ, ಭಾಷೆ, ಪ್ರಜ್ಞೆ, ಪರಿಸರ, ಸಮಾಜ, ಮತ, ಸಂಸ್ಕಾರ ಅಜ್ಞೇಯಾದಿಗಳು– ಇವುಗಳು ನೀಡುವ ಅನುಭವಗಳ ಸುರುಳಿಯೇ ಬದುಕು. ಆದುದರಿಂದ ಈ ಅನುಭವಗಳೇ ಸಾಹಿತ್ಯದ ಮೂಲ ಸಾಮಗ್ರಿ. ಆದರೆ ಎಲ್ಲ ಅನುಭವಗಳೂ ಮಾತಿನ ಮೈಯಲ್ಲಿ ಮೂಡಿ ನಿಲ್ಲುವುದಿಲ್ಲ. ಕೇವಲ ವಿಶೇಷಾನುಭವಗಳು, ಅಭಿವ್ಯಕ್ತಿಯನ್ನು ಅನಿವಾರ್ಯಗೊಳಿಸುವ ಉತ್ಕಟಾನುಭವಗಳು ಮಾತ್ರ ಶಬ್ದಶರೀರವನ್ನು ತೊಟ್ಟು, ಉಚಿತ ವೇಷ ಭೂಷಣಗಳನ್ನುಟ್ಟು ಕವಿತೆಯಾಗಿ ಮೈದೋರುತ್ತವೆ.

ಈ ಉತ್ಕಟಾನುಭವಗಳು ಕೇವಲ ಕವಿಗಳ ಸೊತ್ತಲ್ಲ. ಎಲ್ಲ ಜನರೂ ಅವರು ಸಾಮಾನ್ಯರಿರಲಿ, ಅಸಾಮಾನ್ಯರಿರಲಿ, ಆಗಾಗ ಇವುಗಳನ್ನು ಅನುಭವಿಸುತ್ತಲೇ ಇರುತ್ತಾರೆ. ಇವು ಆಕಸ್ಮಿಕವಾಗಿ ಉದ್ಭವಿಸಬಹುದು, ಸಾಂದರ್ಭಿಕವಾಗಿ ಒಡಮೂಡಬಹುದು, ಸಾಮಾಜಿಕ ಸಂಪರ್ಕಗಳಿಂದ ಸೆಲೆಯೊಡೆಯಬಹುದು, ನಿಸರ್ಗ ನಿರೀಕ್ಷಣೆಯಿಂದ ಕುಡಿಯೊಡೆಯಬಹುದು, ಇಲ್ಲವೆ ಏಕಾಂತದಲ್ಲಿ, ಏಕಾಕಿತನದಲ್ಲಿಯೇ ಮೊಳೆಯಬಹುದು. ಆದರೆ ಎಲ್ಲರಿಗೂ ಈ ಅನುಭವಗಳಿಗೆ ಆಕಾರ ಕೊಡುವ ವಿಶೇಷ ಶಕ್ತಿಯೊಂದಿರುವುದಿಲ್ಲ. ಅದಕ್ಕೆ ನವನವೋಲ್ಲೇಖಶಾಲಿನೀ ಪ್ರಜ್ಞೆ ಬೇಕು. ಅದು ಇರುವವರೇ ವಾಕ್‌ತತ್ತ್ವ, ರಸತತ್ತ್ವ, ರೂಪತತ್ತ್ವಗಳ ರಹಸ್ಯಾನ್ವೇಷಣೆ, ಸತತಾನುಸಂಧಾನಗಳಿಂದ ಬುದ್ಧಿ ಸಿಂಚಿತ ಭಾವಗಳಿಗೆ, ಬದುಕು–ಪ್ರಜ್ಞೆ–ಪರಿಸರಗಳು ನೀಡುವ ತೀವ್ರಾನುಭವಗಳಿಗೆ ಸೂಕ್ತ ಉಕ್ತಿಗಳಲ್ಲಿ ಅಭಿವ್ಯಕ್ತಿಯನ್ನು ನೀಡಿ ನಾವು

ಬದುಕನ್ನು ಅರಿತುಕೊಳ್ಳಲು ಬೆಳಗಿಸಿಕೊಳ್ಳಲು, ಬದಲಿಸಿಕೊಳ್ಳಲು, ಸಮಯಾಗಿಸಿಕೊಳ್ಳಲು, ವಿಸ್ತರಿಸಿಕೊಳ್ಳಲು, ಅರ್ಥಪೂರ್ಣಗೊಳಿಸಿಕೊಳ್ಳಲು ನೆರವಾಗುತ್ತಾರೆ. ಪರಿವರ್ತನೆಯ ಹರಿಕಾರರೂ ಆಗುತ್ತಾರೆ.

ಕವಿತೆ ಸಹೃದಯ ವಿಹಾರಿಯಾಗಲು, ಜೀವನೋಜ್ವಲೀಕರಣಕ್ಕೆ ಸಹಕಾರಿಯಾಗಲು, ತುಂಬು ಬಾಳಿನ ರೂವಾರಿಯಾಗಲು ಅನುಭವದ ತೀವ್ರತೆಯೊಡನೆ, ಚಿಂತನೆಯ ಸಾಂದ್ರತೆಯೊಡನೆ ಅದರ ಪ್ರಾಮಾಣಿಕತೆಯೂ ಬೇಕು. ಆಗ ಅದು ಅಥೆಂಟಿಕ್ ಆಗುತ್ತದೆ. ಸಹೃದಯರು ಅನುಭವಿಸಿಯೂ ಅಭಿವ್ಯಕ್ತಿಸಲಾಗದಿದ್ದ ಅನುಭವ ಅದಕ್ಕೆ ಸ್ಪಂದಿಸಿ ಅದು ಅನುಭವಾಮೃತವಾಗುತ್ತದೆ. ಹೀಗೆ ಒಬ್ಬ ಕವಿಯ ವಿಶೇಷಾನುಭವ ಸಂಪತ್ತು ಸರ್ವ ಸಹೃದಯರ ಸಂಪತ್ತಾಗಿ ಬಿಡುತ್ತದೆ. ಆಗಿನ ಸಹೃದಯರಿಗೆ ಮಾತ್ರವಲ್ಲ, ಮುಂದಿನ ಅಗಣಿತ ತಲೆಮಾರುಗಳ ಸಹೃದಯರಿಗೂ ಸಹ. ಭಾರತದ ಭಾಷಾಂತರಗಳ ಮೂಲಕ ಬೇರೆ ದೇಶಗಳ ಪ್ರಾಚೀನ ವರಕವಿಗಳ ಅತ್ಯಮೋಘ ಕೃತಿಗಳು ಇಂದಿನವರಾದ ನಮ್ಮ ಮೇಲೆಯೂ ಅನಿರ್ವಚನೀಯವಾದ ಪರಿಣಾಮವನ್ನು ಬೀರುತ್ತಿಲ್ಲವೆ ?

'ಅವು ಸಾಕು, ಮತ್ತೇಕೆ ಹೊಸ ಕೃತಿಗಳು?' ಎಂದು ಕೇಳುವವರಿಗೆ ಹಿಂದಿನವರು ಉತ್ತರವಿತ್ತಿದ್ದಾರೆ; ಇಂದಿನವರೂ ಸಮಾಧಾನ ನೀಡಿದ್ದಾರೆ. ಮುಖ್ಯವಾಗಿ ಗಮನಿಸಬೇಕಾದುದು ಪರಮಕವಿ ಪಂಪನ ಈ ಮಹೋಕ್ತಿ: 'ಇದು ನಿಚ್ಚಂ ಪೊಸತರ್ಣವಂಬೊಲತಿ ಗಂಭೀರಂ ಕವಿತ್ವಂ ಜಗಕ್ಕೆ.' ಸಮುದ್ರವನ್ನೇ ನೋಡದ ಕವಿಗಳೂ ಸಮುದ್ರವನ್ನು ವರ್ಣಿಸಿದ್ದಾರೆ. ಅವರು ಸಮುದ್ರವೆಲ್ಲವನ್ನೂ ವರ್ಣಿಸಿದಂತಾಯಿತೆ? ಸಮುದ್ರ ನಿತ್ಯ ನವೀನ ರೂಪಗಳನ್ನು ತಾಳುವುದು ನಿಂತುಹೋಯಿತೆ ? ಉಷೆಯಂತೆ ಎಲ್ಲವೂ 'ಪುನಃಪುನಃ ಜಾಯಮಾನ ಪುರಾಣೀ' ಹೊಸ ಹೊಸ ಹುಟ್ಟು, ಹೊಸ ಹೊಸ ಹೊಗರು, ಹೊಸ ಹೊಸ ರೂಪ ಎಲ್ಲಕ್ಕೆ ಮಾನವನ ಬದುಕೂ ಸಾಗರೋಪಮ. ವಿಶ್ವ ಕವಿ ಕಲಾವಿದರೆಲ್ಲ ಸೇರಿ ಅದರಿಂದ ಹೀರಿ ಹಿಡಿದಿಟ್ಟಿರುವುದು ಸಿಂಧುವಿನ ಒಂದು ಬಿಂದುವಿಗೆ ಸಮಾನ.

ಆದುದರಿಂದ ಹೊಸ ಹೊಸ ಕಾವ್ಯರಚನೆ ನಿರಂತರವಾಗಿ ನಡೆಯಬೇಕಾದುದೇ; ಹೊಸತನದ ಹುಡುಕಾಟ ಅವಿಚ್ಛಿನ್ನವಾಗಿ ಮುಂದುವರಿಯಬೇಕಾದುದೇ. ಆಗ ಮಾತ್ರ ಹೃದ್ಯ ವೈವಿಧ್ಯ, ನಿತಾಂತ ಸುಂದರ ನಾವೀನ್ಯ. ನಮ್ಮ ಕನ್ನಡ ಕಾವ್ಯ ಪ್ರಪಂಚವನ್ನೇ ನೋಡಿರಿ: ಅಂದಿನಿಂದ ಇಂದಿನವರೆಗೆ ಎಂಥ ವಿಸ್ಮಯಜನಕ ವೈವಿಧ್ಯ; ಎಂಥ ನವನವೀನ ಪ್ರಯೋಗಗಳು, ಕಾಣ್ಕೆಗಳು, ಕಾವ್ಯೋದ್ದೇಶಗಳು, ಎಂಥ ನಿರಂತರತೆ ! 'ಇದು ನಿಚ್ಚಂ ಪೊಸತು' ಎಂಬ ಪಂಪೋಕ್ತಿ ಸಾರ್ಥಕವಾಗಿದೆ ಇಲ್ಲಿ.



ಹೊಸತನ ಕವಿಯ ಮನದ ಮೂಸೆಯಲ್ಲಿ ಕರಗಿ ಹರಳುಗಟ್ಟುವ ವಸ್ತುವಲ್ಲ. ಹಲವು ಹೊಸ ಹೊಸ ವಿದ್ಯಮಾನಗಳು, ಘಟನೆಗಳು, ವಿಚಾರಗಳು, ವೈಜ್ಞಾನಿಕ ಆವಿಷ್ಕಾರಗಳು, ಸಮಾಜೋ–ಆರ್ಥಿಕ ಕ್ರಾಂತಿಗಳು, ಯುದ್ಧ–ಶಾಂತಿಯ ಕಣ್ಣುಮುಚ್ಚಾಲೆಗಳು, ದರ್ಶನಗಳು, ಘರ್ಷಣೆಗಳು, ಸಂಘರ್ಷಗಳು ಮಾನವ ಜೀವನವನ್ನೇ ಪರಿವರ್ತಿಸಿಬಿಡುತ್ತವೆ. ಆ ಪರಿವರ್ತನೆಗಳ ನರ್ತನ ಕವಿ ಕೃತಿರಂಗದ ಮೇಲೂ ನಡೆಯುತ್ತದೆ. ಕಾವ್ಯಕಲೆಗಳಲ್ಲಿ ಹೊಸತನ ತಾನೇ ತಾನಾಗಿ ಮೂಡಿ ಬರುತ್ತದೆ.

ಈ ಹೊಸತನ ಹೊರಮೈಯ, ಮೇಲ್ಪದರಿನ ಹೊಸತನ ಮಾತ್ರ ಆಗಬಾರದು; ಒಳ ತಿರುಳಿನ, ಹುರುಳಿನ, ಹೂರಣದ ಹೊಸತನವೂ ಆಗಬೇಕು; ಹೊಸ ರೂಪಗಳ ಹುಡುಕಾಟದ ಜೊತೆಗೆ ಇದ್ದ ರೂಪಗಳ ಹೊಸ ಸಾಧ್ಯತೆಗಳ ಹುಡುಕಾಟವೂ ನಡೆಯಬೇಕು. ಇದ್ದ ರೂಪಗಳಲ್ಲಿ ಇದುವರೆಗೆ ಸಾಧ್ಯವಾಗಿಸದಿದ್ದ ಸಾಧ್ಯತೆಗಳನ್ನು ಕಂಡುಹಿಡಿಯುವುದೂ ಹೊಸತನವೇ. ಇದ್ದುದರ ವಿರುದ್ಧವಾಗಿ ನಿಲ್ಲುವುದೇ ಹೊಸತನವಲ್ಲ. To be exactly the opposite is also an act of plagiarism.

ಮೇಲಾಗಿ ಇಲ್ಲದುದರಿಂದ ಏನೂ ಹುಟ್ಟುವುದಿಲ್ಲ. ನಾಸತೊ ವಿದ್ಯತೇ ಭಾವೋ, ನಾಭಾವೋ ವಿದ್ಯತೇ ಸತಃ ಇದ್ದುದರಿಂದಲೇ ಹೊಸದಾಗಿ ಹುಟ್ಟುವ ಎಲ್ಲವೂ ಹೊಸದೇ. ಹೊಸ ಕಾಣ್ಕೆಯಿಂದ ಹೊಸತನ, ಹೊಸ ನೋಟದಿಂದ ಹೊಸತನ; ಹೊಸ ಆಶಯಗಳಿಂದ ಹೊಸತನ; ನುಡಿಯ ಹೊಸ ನಡಿಗೆ ಬೆಡಗುಗಳಿಂದ ಹೊಸತನ.

ಇಂತಿಂಥ ವಸ್ತುಗಳನ್ನು ಬಳಸಿಕೊಂಡು ಬರೆದರೆ ಮಾತ್ರ ಹೊಸತನ, ಇಂತಿಂಥ ವಿಚಾರ ಪ್ರಣಾಳಿಗಳನ್ನು ಪ್ರತಿಪಾದಿಸಿ ಬರೆದರೆ ಮಾತ್ರ ಹೊಸತನ, ಇಂತಿಂಥ ಆಂದೋಲನಗಳಲ್ಲಿ ಪಾಲುಗೊಳ್ಳುತ್ತ ಬರೆದರೆ ಮಾತ್ರ ಹೊಸತನ–ಹೀಗೆ ಹಲವು ಬಗೆಯ ಅಭಿಪ್ರಾಯಗಳಿವೆ. ಕವಿತೆಯಲ್ಲಿ ಭಾವನಾಂಶವೆಷ್ಟಿರಬೇಕು, ಚಿಂತನಾಂಶವೆಷ್ಟಿರಬೇಕು, ಜನಪರಾಂಶವೆಷ್ಟಿರಬೇಕು, ಸಾಮಾಜಿಕ ಹೊಣೆಗಾರಿಕೆ ಎಷ್ಟಿರಬೇಕು, ಇತ್ಯಾದಿಗಳ ಬಗ್ಗೆ ವಾದವಿವಾದಗಳಿವೆ. ಇವೆಲ್ಲ ಸಾಹಿತ್ಯಕ್ಕೆ ಮುಖ್ಯವಾದುದು ಸಮಗ್ರತೆಯೆಂಬುದನ್ನು ಬದಿಗಿರಿಸಿ ನೋಡುವುದರಿಂದ ಕಾವ್ಯದಲ್ಲಿ ಕಾಣುವ ಆಂಶಿಕ ರೂಪಗಳು. ಭರತಮುನಿ ಬಹಳ ಹಿಂದೆಯೇ ಕಂಡುಕೊಂಡ ಸತ್ಯವಿದು :

"ತ್ರೈಲೋಕ್ಯಸ್ಯಾಸ್ಯ ಸರ್ವಸ್ಯ ನಾಟ್ಯಂ ಭಾವಾನುಕೀರ್ತನಂ।
ಕ್ವಚಿದ್ಧರ್ಮಃ ಕ್ವಚಿತ್ ಕ್ರೀಡಾ ಕ್ವಚಿದರ್ಥಃ ಕ್ವಚಿಚ್ಛಮಃ ॥
ಕ್ವಚಿದ್ಧಾಸ್ಯಂ ಕ್ವಚಿದ್ಯುದ್ಧಂ ಕ್ವಚಿತ್ಕಾಮಃ ಕ್ವಚಿದ್ವಧಃ ।
ಧರ್ಮೋ ಧರ್ಮ ಪ್ರವೃತ್ತಾನಾಂ ಕಾಮಃ ಕಾಮೋಪ ಸೇವಿನಾ॥
ನಿಗ್ರಹೋ ದುರ್ವಿನೀತಾನಾಂ ವಿನೀತಾನಾಂ ದಮಕ್ರಿಯಾ।
ಕ್ಲೀಬಾನಾಂ ಧಾರ್ಷ್ಟ್ಯಜನನಂ ಉತ್ಸಾಹಃ ಶೂರ ಮಾನಿನಾಂ॥
ಅಬುಧಾನಾಂ ವಿಬೋಧಶ್ಚ ವೈದುಷ್ಯಂ ವಿದುಷಾಮಪಿ।
ಈಶ್ವರಾಣಾಂ ವಿಲಾಸಶ್ಚ ಸ್ಥೈರ್ಯಂ ದುಃಖಾರ್ತಿರಸ್ಯ ಚ॥
ಅರ್ಥೋಪಜೀವಿನಾಮರ್ಥಃ ಧೃತಿರುದ್ವಿಗ್ನ ಚೇತಸಾಂ।
ನಾನಾ ಭಾವೋಪಸಂಪನ್ನಂ ನಾನಾವಸ್ಥಾಂತರಾತ್ಮಕಂ॥
ಲೋಕ ವೃತ್ತಾನುಕರಣ ನಾಟ್ಯಮೇತನ್ಮಯಾ ಕೃತಂ ।
ಉತ್ತಮಾಧಮ ಮಧ್ಯಾನಾಂ ನರಾಣಾಂ ಕರ್ಮ ಸಂಶ್ರಯಂ ॥
ನ ತತ್‌ಜ್ಞಾನಂ ನತಚ್ಛಿಲ್ಪಂ ನ ಸಾ ವಿದ್ಯಾ ನ ಸಾ ಕಲಾ।
ನಾ ಸಾ ಯೋಗೋ ನ ತತ್ ಕರ್ಮ ನಾಟ್ಯೇಸ್ಮಿನ್ ಯನ್ನದೃಶ್ಯತೇ॥
ಸೋಯಂ ಸ್ವಭಾವೋ ಲೋಕಸ್ಯ ಸುಖ ದುಃಖ ಸಮನ್ವಿತಃ
ಸೋಂಗಾದ್ಯಭಿನಯೋಪೇತೋ ನಾಟ್ಯಮಿತ್ಯಭಿದೀಯತೇ॥

(ನಾಟ್ಯಶಾಸ್ತ್ರ ೧-೧೦೬-೧೨೨)

(ಈ ತ್ರೈಲೋಕ್ಯವೆಲ್ಲದರ ಅನುಕೀರ್ತನವೇ ನಾಟ್ಯ. ಒಂದು ಕಡೆ ಧರ್ಮ, ಒಂದು ಕಡೆ ಕ್ರೀಡೆ. ಒಂದು ಕಡೆ ಅರ್ಥ, ಒಂದು ಕಡೆ ಶಾಂತಿ. ಒಂದು ಕಡೆ ಹಾಸ್ಯ, ಒಂದು ಕಡ ಯುದ್ಧ. ಒಂದು ಕಡೆ ಕಾಮ, ಒಂದು ಕಡೆ ಕೊಲೆ. ಧರ್ಮ ತತ್ಪರರ ಧರ್ಮ, ಕಾಮಾಸಕ್ತರ ಕಾಮ. ಉದ್ಧತರ ನಿಗ್ರಹ, ವಿನಯಶಾಲಿಗಳ ಇಂದ್ರಿಯ ನಿಗ್ರಹ. ಹೇಡಿಗಳ ಧಾರ್ಷ್ಟ್ಯ ಜನನ, ಶೂರರ ಉತ್ಸಾಹ. ಅಜ್ಞರ ಪ್ರಬೋಧ ವಿದ್ವಾಂಸರ ಪಾಂಡಿತ್ಯ. ಶ್ರೀಮಂತರ ವಿಲಾಸ, ದುಃಖಪೀಡಿತರ ಮನಃಸ್ಥೈರ್ಯ. ಅರ್ಥಪರರ ಅರ್ಥಸಂಗ್ರಹ, ಕದಡು ಮನಸ್ಸಿನವರ ಧೃತಿ–ಹೀಗೆ ಅನೇಕ ಭಾವಗಳಿಂದ ಸಂಪನ್ನವಾಗಿ, ಅನೇಕ ಅವಸ್ಥೆಗಳನ್ನು ಒಳಗೊಂಡು ಲೋಕದ ನಡೆವಳಿಕೆಯನ್ನು ಅನುಕರಿಸುವ ನಾಟ್ಯವನ್ನು ನಾನು ನಿರ್ಮಿಸಿದೆನು. ಇದಕ್ಕೆ ಉತ್ತಮ, ಮಧ್ಯಮ, ಅಧಮ– ಈ ಎಲ್ಲರ ಕಾರ್ಯಗಳೂ ಆಧಾರ.... ಈ ನಾಟ್ಯದಲ್ಲಿ ಕಾಣಬಾರದ ಜ್ಞಾನ ವಿಲ್ಲ, ಶಿಲ್ಪವಿಲ್ಲ, ವಿದ್ಯೆಯಿಲ್ಲ, ಕಲೆಯಿಲ್ಲ, ಯೋಗವಿಲ್ಲ, ಕಾರ್ಯವಿಲ್ಲ....ಸುಖದುಃಖ ಗಳಿಂದ ಕೂಡಿದ ಲೋಕ ಸ್ವಭಾವವೇನೇನುಂಟೋ ಅದೆಲ್ಲವೂ ಆಂಗಿಕವೇ ಮೊದಲಾದ ಅಭಿನಯಗಳಿಂದ ಕೂಡಿ ನಾಟ್ಯವೆಂದು ಕರೆಯಿಸಿಕೊಳ್ಳುತ್ತದೆ.)

* ಆಕರ : ಭಾರತೀಯ ಕಾವ್ಯ ಮೀಮಾಂಸೆ



ಇಲ್ಲಿ 'ನಾಟ್ಯಂ' ಎಂಬ ಪದಕ್ಕೆ ಬದಲಾಗಿ 'ಕಾವ್ಯ'ವೆಂಬ ಶಬ್ದವನ್ನಿರಿಸಿ ಬಿಟ್ಟರೆ ಸಾಕು–ಎಂದು ಸೂಕ್ತವಾಗಿಯೇ ಹೇಳಿದ್ದಾರೆ ಆಚಾರ್ಯ ತೀ. ನಂ. ಶ್ರೀ. ಅವರು. ಎಂಥ ಸಮಗ್ರ ದೃಷ್ಟಿಯಿದು.

ಈ ಸಮಗ್ರ ದೃಷ್ಟಿಗೆ ಶರಣು ಹೊಡೆದು ಕಾವ್ಯದ ವಸ್ತು, ಉದ್ದೇಶ, ಆಶಯ, ಆದರ್ಶಾದಿಗಳನ್ನು ಸೀಮಿತಗೊಳಿಸಿಕೊಂಡು ಬಿಟ್ಟರೆ ಏಕತಾನತೆಗೆ ಆಹ್ವಾನ ವಿತ್ತಂತೆ, ಪೌನಃಪುನ್ಯಕ್ಕೆ ನಿಮಂತ್ರಣ ನೀಡಿದಂತೆ. Law of diminishing returns ಗೆ ಕರೆಯೋಲೆ ಕಳಿಸಿದಂತೆ. ಸರ್ವಂಕಷ ಪ್ರತಿಭೆ ಸಮಗ್ರತೆಯಿಂದಲ್ಲದೆ ಸಿದ್ಧಿಯನ್ನು ಪಡೆಯಲಾರದು. ಆದುದರಿಂದ ಸಮಗ್ರತೆ, ಸಹಜತೆ, ಸಜೀವತೆಗಳು ಸಾರ್ಥಕ ಕವಿತೆಯ ತ್ರಿವೇಣಿಯಾಗಬೇಕೆನ್ನಿಸುತ್ತದೆ. ವಿಶ್ವಪ್ರಕೃತಿ ಮಾನವಪ್ರಕೃತಿಗಳ ಚಿರಂತನ ಲೀಲಾ ವಿನ್ಯಾಸ, ತ್ರೈಕಾಲಿಕೀ ಪ್ರಜ್ಞೆಯ ನವನವೋನ್ಮೀಲನ, ಸಮಕಾಲೀನ ಜೀವನದ ಪರಿವರ್ತನೆಗಳ ನರ್ತನ, ಅಂತರ್ಮುಖತೆ ಬಹಿರ್ಮುಖತೆಗಳ ಸುಂದರ ಸಮ್ಮಿಳನ, ವಾಗರ್ಥಗಳ ಸರಸ ಸಹಜೀವನ, ತತ್ಕಾಲವನ್ನು ಅನಂತಕಾಲವನ್ನಾಗಿ ಸುವ, ಸ್ಥಳೀಯತೆಯನ್ನು ಸಾರ್ವದೇಶಿಕತೆಯನ್ನಾಗಿಸುವ ಸಹಜ ಸುಂದರ ನಿರೂಪಣೆ, ಪಕ್ಲಾನ, ಮುದಹೀನ, ದೀನ ಮನಗಳಿಗೂ ಮೃತಸಂಜೀವಿನಿಯಾಗಬಲ್ಲ ಜೀವಂತ ತನಗಳು ಕಾಲವನ್ನು ಆರೋಹಿಸಬಲ್ಲ ಕವಿಗಳ ಭಂಡವಾಳ.

ಕನ್ನಡದ ಮಹೋನ್ನತ ಕಾವ್ಯಗಳಲ್ಲೆಲ್ಲ ಇವು ಮೂರೂ ಮುಪ್ಪುರಿ ಗೊಂಡಿವೆ. ಇಂದಿನ ಶ್ರೇಷ್ಠಕವಿಗಳ ರಚನೆಗಳಲ್ಲಿಯೂ ಇವು ಎದ್ದು ಕಾಣುತ್ತಿವೆ. ಬೃಹತ್ತು ಮಹತ್ತುಗಳ ಸಂಗಮದಿಂದ ಕಲೆಯ ಪರಮೋಚ್ಚ ಸಿದ್ಧಿಯೆನಿಸಿರುವ ಭಗವಾನ್ ಬಾಹುಬಲಿ ಗೋಮಟೇಶ್ವರನ ಸನ್ನಿಧಿಯಲ್ಲಿಂದು ಕನ್ನಡ ಸ್ವನಾಮ ಧನ್ಯ. ಸನ್ಮಾನ್ಯ ಕವಿ–ಕವಯಿತ್ರಿಯರಾದ ಸರ್ವಶ್ರೀ ಸು. ರಂ. ಎಕ್ಕುಂಡಿಯವರು, ಎಂ. ಅಕಬರಅಲಿ ಅವರು, ಲಕ್ಷ್ಮೀನಾರಾಯಣಭಟ್ಟರು, ದೊಡ್ಡರಂಗೇಗೌಡರು, ವೇಣು ಗೋಪಾಲ ಸೊರಬ ಅವರು, ಪಂಚಾಕ್ಷರಿ ಹಿರೇಮಠ ಅವರು, ಜಿನದತ್ತದೇಸಾಯಿ ಅವರು, ಪದ್ಮ ಪ್ರಸಾದ ಅವರು, ಶೈಲಜಾ ಉಡಚಣ ಅವರು, ಮಾಲತಿ ಪಟ್ಟಣ ಶೆಟ್ಟಿಯವರು, ಧರಣೇಂದ್ರ ಕುರಕುರಿಯವರು, ಶಶಿಕಲಾ ವೀರಯ್ಯಸ್ವಾಮಿಯವರು, ಉಜ್ವಲಾ ಪ್ರಣಜಗೌಡರರವರು, ನಾ. ಉಜಿರೆ ಅವರು ಭಾವಪರತೆ, ಚಿಂತನಪರತೆ, ಜನಪರತೆಗಳು ಬೆರೆತು, ಬೆಡಗುಗೊಂಡ ತಮ್ಮ ಕವಿತೆಗಳನ್ನು ಓದಿ ತಮ್ಮನ್ನೂ, ನನ್ನನ್ನೂ ಉಲ್ಲಸಿತರನ್ನಾಗಿ ಮಾಡಿದ್ದಾರೆ. ನಮ್ಮ ಕನ್ನಡ-ಸಂಸ್ಕೃತಿ ಮಂತ್ರಿಗಳಾದ ಮಾನ್ಯ ಶ್ರೀ ಎಚ್. ವಿಶ್ವನಾಥ ಅವರು ಸ್ವಪ್ರೇರಣೆಯಿಂದ ಈ ಕವಿ ಸಮ್ಮೇಳನದಲ್ಲಿ ಪಾಲ್ಗೊಂಡು ತಮ್ಮ ಇಲಾಖೆಯೂ ಪಾಲ್ಗೊಳ್ಳುವಂತೆ ಮಾಡಿ ಇದಕ್ಕೆ ಇನ್ನಷ್ಟು ಮೆರಗು ನೀಡಿದ್ದಾರೆ. ಇವರೆಲ್ಲರಿಗೂ, ಇಲ್ಲಿ ನೆರೆದ ತಮ್ಮೆಲ್ಲರಿಗೂ ನನ್ನ ನಮನ ಗಳನ್ನು ಸಲ್ಲಿಸಿ ನನ್ನದೊಂದು ಕವಿತೆಯನ್ನು ವಾಚಿಸಿ ವಿರಮಿಸುತ್ತೇನೆ.

## ವಿಶ್ವವಿಸ್ಮಯಕರ

ಕತ್ತಲೆಗೆ ಇರಬಹುದು ಬೆಳಕಿನ ಭಯ
ಬೆಳಕಿಗೆ ಇರಬಹುದೆ ಕತ್ತಲೆಯ ಭಯ ?
ರಾಗಕ್ಕೆ ಇರಬಹುದು ವಿರಾಗದ ಭಯ
ವಿರಾಗಕ್ಕೆ ಇರಬಹುದೆ ರಾಗದ ಭಯ ?
ಯಾರಿಗೆ ಯಾವ ಭಯವೇ ಇರಲಿ
ಶ್ರೀ ಗೊಮ್ಮಟನ ಸನ್ನಿಧಿಯಲಿ
ಯಾರಿಗೆ ಯಾವ ಭಯ ?
ಇವನು ದಯಾಮಯ :
ಇಲ್ಲಿ ಎಲ್ಲ ನಿರ್ಭಯ
ಎಲ್ಲರಿಗೂ ಅಭಯ !

ಶತಶತಮಾನಗಳಿಂದ
ಈ ಆದಿ ತೀರ್ಥಕರ ಕುಮಾರನ
ತ್ಯಾಗಯೋಗಗಳ ಸಾರೋದ್ಧಾರನ
ಪಾವನತೆಯ ಪಾರಾವಾರನ
ಶ್ರೀರೂಪದಿ ಲೋಕೋತ್ತರನ
ಶ್ರೀಮುಖ ಶಾಂತಿ ಸುಧಾವೃಷ್ಟಿ ಸಂಜನಿತ
ಅದೃಶ್ಯ ಅಭಯ ಅಮೃತ ಗಂಗೆ ಹರಿಯುತ್ತಲೇ ಇದೆ.

ದಯೆ, ದಮ, ದಾನ, ತಪ, ಶೀಲ,
ಸತ್ಯ, ಅಹಿಂಸೆ, ಅಪರಿಗ್ರಹಾದಿ
ಮಂಗಳ ತರಂಗಗಳೊಡನೆ !

ಇದರಲ್ಲಿ ಮಿಂದು ಮಡಿಯಾದವರು ಕೋಟಿ ಕೋಟಿ;
ಶಾಂತಿ ಪಡೆದವರು ಸಾವಿರ ಕೋಟಿ ;
ಧನ್ಯರಾದವರು ಅಗಣಿತ ಕೋಟಿ !

ಭೂಮಾತ್ ಸುಖಂ, ನ ಅಲ್ಪೇ ಸುಖಮಸ್ತಿ :
ತ್ಯಾಗಾತ್ ಸುಖಂ, ನ ಭೋಗೇ ಸುಖಮಸ್ತಿ
ಎಂಬ ಸತ್ಯಕ್ಕೆ ಸಾಕ್ಷಿಯಾಗಿ,
ಅಹಿಂಸೆ ಅನುಕಂಪೆಗಳೆ ಅಕ್ಷಿಯಾಗಿ



ವೀತರಾಗತೆಯೆ ವದನವಾಗಿ,
ಸ್ನೈಪಿನ ಸದನವಾಗಿ,
ಅಮಲ ಆನಂದವೇ ಅಮೃತಸ್ಮಿತವಾಗಿ,
ಜೀವರಾಶಿಗಳ ಸುಕೃತವಾಗಿ,
ವಿಶಾಲ ವಕ್ಷಸ್ಥಲವೇ ಚಿದಾಕಾಶವಾಗಿ,
ಕೈವಲ್ಯ ಕೋಶವಾಗಿ,
ಭವ್ಯ ಬಾಹುಗಳೆ ದಿವ್ಯರಕ್ಷೆಗಳಾಗಿ,
ಶ್ರೀ ಪಾದಗಳೆ ಸುರವೃಕ್ಷಗಳಾಗಿ
ನಿಂತಿರುವನೀ ನಿಃಸ್ಪೃಹರ ನಿಜದೈವ
ಸಮ್ಯಕ್ತ್ವ ಸಂಜೀವ ।

ನಿಲ್ಲುವನು ಇಂತೆಯೇ ಚಿರಂತನನಾಗಿ
ಶಾಂತಿಯನ್ನು ಪಸರಿಸುತ,
ಸನ್ಮತಿಯ ಸೂಸುತ್ತ
ಸದ್ಗತಿಯ ತೋರುತ್ತ
ಸದ್ಬೋಧೆ ಬೀರುತ್ತ
ಸಮತೆಯನು ಸಾರುತ್ತ
ಕಾಲನನು ಮೀರುತ್ತ
ಈ ನಾಡ ಗೌರವ ಗಿರಿಯ ಗೌರೀಶಂಕರ
ಭರತಾವನಿಗೆ ಅಭಯಂಕರ
ದಿಗಂಬರವೆ ದಿವ್ಯಾಂಬರವಾಗಿಹ
ನಕ್ಷತ್ರ ಮಾಲಾಧರ
ವಿಶ್ವ ವಿಸ್ಮಯಕರ !